



## ‘ಕಾಮಸೂತ್ರ’ ಬೇಕೆ?

ಈಚೆಗೆ ಶುರುವಾಗಿರುವ ‘ಆಯುಷ್’ ಟಿವಿ ವಾಹಿನಿ ನಿಜಕ್ಕೂ ಬಹಳ ಒಳ್ಳೆಯ ಕನ್ನಡದ ವಾಹಿನಿ. ಅದರಲ್ಲೂ ಧರ್ಮಸ್ಥಳದ ಹೆಗ್ಗಡೆಯವರು ‘ನ್ಯಾಚುರೋಪತಿ ಮತ್ತು ಯೋಗ ಸ್ಕೂಲ್’ನಿಂದ ಹೇಳಿಕೊಡುತ್ತಿರುವ ಯೋಗ ಆಸನಗಳು ಬಹಳ ಉಪಯುಕ್ತ. ಆರೋಗ್ಯದ ಅಡುಗೆಗಳು, ಮತ್ತಿತರೇ ಆರೋಗ್ಯದ ಬಗೆಗಿನ ಕಾರ್ಯಕ್ರಮಗಳು ಖಂಡಿತ ಸ್ವಾಗತಾರ್ಹ.

ಆದರೆ... ಈಗ ಈ ವಾಹಿನಿಯವರು ‘ಕಾಮಸೂತ್ರ’ ಅಂತ ಒಂದು ಕಾರ್ಯಕ್ರಮ ಶುರು ಮಾಡಿದ್ದಾರೆ. ಇದು ಬೇಕಿತ್ತೆ? ಕೇವಲ ಸಂಪಾದಿಸುವ ಸಲುವಾಗಿ ಈ ತರಹ ಒಂದು ಆಕರ್ಷಕ ಶೀರ್ಷಿಕೆ ಇಟ್ಟು ನಮ್ಮ ಯುವ ಜನರನ್ನು ಆಕರ್ಷಿಸಿ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಒಂದು ಹುನ್ನಾರ ಅಂತ ನನ್ನ ಅಭಿಪ್ರಾಯ.

–ಶ್ರೀನಿವಾಸನ್, ಮೈಸೂರು

## ಹೃದಯವಂತ ಕನ್ನಡ ಮೇಷ್ಟ್ರು

ಝೀ ಕನ್ನಡ ‘ವೀಕೆಂಡ್ ವಿಥ್ ರಮೇಶ್’ನಲ್ಲಿ ಪರಿಚಯಿಸಿದ ನಮ್ಮ ಮೈಸೂರಿನ ಅಪ್ಪಟ ಕನ್ನಡ ಮಷ್ಟ್ರು ಸೌಜನ್ಯಕ್ಕೆ ನಮೋ ನಮಃ. ಸಾಧಕರ ಕುರ್ಚಿಗೆ ನಮ್ರತೆಯಿಂದ ವಂದಿಸಿ, ನಂತರ ಕೆಂಪು ಕುರ್ಚಿಯಲ್ಲಿ ಕುಳಿತ ಏಕೈಕ ವ್ಯಕ್ತಿ. ಸದಾ ಹಸನ್ಮುಖಿ ಅರಳು ಹುರಿದಂತೆ ಮಾತನಾಡಿ ಜಗದುದ್ದಗಲಕ್ಕೂ ಎಲ್ಲರನ್ನೂ ನಕ್ಕುನಗಿಸುವ ಮಾನ್ಯ ಕೃಷ್ಣೇಗೌಡರ ಕಣ್ಣಲ್ಲಿ ನೀರು ಉಕ್ಕಿಬರುತ್ತಿರುವ ದುಃಖ ನೋಡಿದಾಗ ಏನೇ ಸಂಪಾದನೆ ಮಾಡಿದ್ದರೂ ಅಂತರಾಳದ ನೋವು ಹೊರಬಂದಿದ್ದು ಮಾನವ ಸಹಜ ಗುಣ. ಅಂತೂ ಆ ಕುರ್ಚಿ, ಸಾಧಕರಲ್ಲಿ ಬಹುಪಾಲು ಮಂದಿಯನ್ನು ಕಣ್ಣೀರು ಹಾಕಿಸುತ್ತದೆ.

ನಿಜವಾಗಲೂ ಅವರ ವ್ಯಕ್ತಿತ್ವದ ಮಜಲುಗಳು, ಅನುಕರಿಸಬಹುದಾದ ಉದಾತ್ತ ಗುಣಗಳು, ಯಾರನ್ನೂ ದ್ವೇಷಿಸದೆ ಮಧುರ ಬಾಂಧವ್ಯ ಹೊಂದಿದವರನ್ನು ಪರಿಚಯಿಸಿದ ರಮೇಶ್‌ಗೆ ನಮನ.

–ಲಲಿತಾ ಅಂಬಾಗಿಲು, ಉಪ್ಪುಂದ

ವಾರದ ಪತ್ರ

## ಇವರಿಗೆ ಗುತ್ತಿಗೆ ಪಡೆದಿದ್ದಾರಾ?

ವಾಹಿನಿಗಳಲ್ಲಿ ಹಾಸ್ಯದ ಬಗ್ಗೆ ಹಲವಾರು ಕಾರ್ಯಕ್ರಮಗಳು. ಬಂದು ಹೋಗುತ್ತವೆ. ಝೀ ವಾಹಿನಿಯ ಕಾಮಿಡಿ ಕಿಲಾಡಿಗಳು ಜನರ ಮೆಚ್ಚುಗೆ ಗಳಿಸಿ ಮುಕ್ತಾಯಗೊಂಡು ಎರಡನೇ ಸರದಿಗಾಗಿ ಕಾಯುತ್ತಿದೆ. ಆದರೆ ಕನ್ನಡ ಕಲರ್ಸ್ ವಾಹಿನಿಯ ಕಳಪೆ ಕಾರ್ಯಕ್ರಮ ಮಜಾ ಟಾಕೀಸ್ ಮಾತ್ರ ಇನ್ನೂ ಪ್ರಸಾರವಾಗುತ್ತಲೇ ಇದೆ. ಕಾರ್ಯಕ್ರಮದ ನಿರೂಪಕ ಸೃಜನ್‌ನ ವಿಕೃತ ಮನಸ್ಸು ನೋಡಿ ನೋಡಿ ಮನಸ್ಸು ರೋಸಿಹೋಗಿದೆ. ವೀಕ್ಷಕರನ್ನು ಅವಮಾನ ಮಾಡುವುದು, ಅವಹೇಳನ ಮಾಡುವುದು ಕಾರ್ಯಕ್ರಮಕ್ಕೆ ಬಂದ ಯಾವುದೇ ಹೆಣ್ಣು ಮಕ್ಕಳನ್ನು ತಬ್ಬಿಕೊಳ್ಳುವುದು ಅವರ ಚಟ ಎಂದರೆ ತಪ್ಪಾಗಲಾರದು. ಕನ್ನಡದಲ್ಲಿ ಹಲವು ನಾಯಕ ನಟರು ಉದಾ: ರಮೇಶ್, ಸುದೀಪ್, ರವಿಚಂದ್ರ, ಗಣೇಶ್ ಕಾರ್ಯಕ್ರಮ ನಡೆಸಿಕೊಡುತ್ತಾರೆ. ಅವರ್‍ಯಾರು ಹೆಣ್ಣಿನ ಜೊತೆ ಈ ರೀತಿ ವರ್ತಿಸುವುದಿಲ್ಲ. ಅದು ಅವರ ವ್ಯಕ್ತಿತ್ವ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಹಾಸ್ಯಮಯ ‘ವೀಕ್ ಎಂಡ್’

ಝೀ ಕನ್ನಡದಲ್ಲಿ ರಮೇಶ್ ಕೃಷ್ಣೇಗೌಡರೊಂದಿಗೆ ನಡೆಸಿದ ಕಾರ್ಯಕ್ರಮ ಹಾಸ್ಯಮಯವಾಗಿ, ಮನಕ್ಕೆ ಮುದ ನೀಡಿತು. ‘ಸೀಸನ್–3’ ರಲ್ಲಿ ರಮೇಶ್ ಚಲನಚಿತ್ರ ಕಲಾವಿದರೇ ಅಲ್ಲದೆ ಸಮಾಜದ ಇತರ ಗಣ್ಯರನ್ನು (ಉದಾ: ಪೊಲೀಸ್ ಅಧಿಕಾರಿ, ಮಾಜಿ ಲೋಕಾಯುಕ್ತರು, ಹಾಸ್ಯ ಕಲಾವಿದರು) ಆಯ್ಕೆ ಮಾಡಿಕೊಂಡಿರುವುದು ವಿಭಿನ್ನ ಪ್ರಯೋಗ, ಅದಕ್ಕೆ ಅವರು ಪ್ರಶಂಸಾರ್ಹರು.

ಈ ಕಾರ್ಯಕ್ರಮದ ಇನ್ನೊಂದು ಕೊರತೆ, ವಾಹಿನಿಯವರು, ರೆಕಾರ್ಡಿಂಗ್ ಸಮಸ್ಯೆಯನ್ನು ಸರಿಪಡಿಸಿದರೆ ಉತ್ತಮ. ಇದರಲ್ಲಿ ಭಾಗವಹಿಸುತ್ತಿರುವ ಸಭಿಕರ, ಕರತಾಡನ ಹಾಗೂ ಪ್ರಶಂಸೆಯ ಸೂಚಕ ಕಿವಿಗಡಚಿಕ್ಕುವಂತಿದೆ, ಇದನ್ನು ನಿರೂಪಕರು, ವಾಹಿನಿಯವರು ನಿಯಂತ್ರಿಸಿದರೆ ಟಿವಿ ನೋಡುವವರಿಗೆ ಹಿಂಸೆಯಾಗಲಾರದು.

–ಸುಂದರ್, ಬೆಂಗಳೂರು

## ಮನೆದೇವ್ರು

ಅಸ್ತಮಾ ಕಾಯಿಲೆಗೆ ವಯಸ್ಸಿನ ಭೇದಭಾವ ಇಲ್ಲ. ಚಿಕ್ಕ ವಯಸ್ಸಿನ ಹುಡುಗಿಗೂ ಬರಬಹುದು ಎನ್ನುವ ಸಂದೇಶ ಇದರಲ್ಲಿದೆ. ನಿರ್ದೇಶಕ ಚರಣ್ ಮಲ್ನಾಡ್, ಗಾಯಕಿ ಗೀತಾ ಮಲ್ನಾಡ್ ಸಹೋದರ ಜಗದೀಶ್ ಮಲ್ನಾಡ್‌ಗೆ ಲಕ್ವ ಹೊಡೆಯುತ್ತದೆ. ಅಂದ್ರೆ ಪ್ರಾರಂಭದಲ್ಲೇ ಎಚ್ಚರಿಕೆ ತೆಗೆದುಕೊಳ್ಳದಿದ್ರೆ ಹೀಗಾಗಬಹುದು ಎನ್ನುವ ಸಂದೇಶ ಇದೆ. ಈ ಎರಡೂ ಪಾತ್ರಗಳ ಅವಶ್ಯಕತೆ ಇರಲಿಲ್ಲ. ಜಯರಾಮ ಗೌಡ್ರು ರಣಧೀರ ಕಂಠೀರವನಂತೆ ಕುದಿಯುತ್ತಲ್ಲೇ ಇದ್ದಾರೆ. ಜಾನಕಿ ಮನೆ ಕೆಲಸದವಳಾದ್ರೂ ಅದ್ದೂರಿ ಸೀರೆ ಉಡುತ್ತಾಳೆ. ಮನೆದೇವ್ರ ಪೂಜೆ ಮಾಡುತ್ತಾಳೆ. ಇವಳೇ ಮನೆದೇವ್ರು ಇರಬಹುದು.

–ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಸಾವಿನಲ್ಲೂ ಶೃಂಗಾರ

ಖಾಸಗಿ ವಾಹಿನಿಗಳಲ್ಲಿ ಬರುವ ಬಹುತೇಕ ಧಾರಾವಾಹಿಗಳಲ್ಲಿ ಮಹಿಳಾ ಪಾತ್ರಗಳು ಅಡಿಯಿಂದ ಮುಡಿಯವರೆಗೂ ಸಿಂಗರಿಸಿಕೊಂಡು, ಪೂರ್ಣ ಮೇಕಪ್‌ಗಳೊಂದಿಗೆ ಯಾವಾಗಲೂ ಕಂಗೊಳಿಸುತ್ತಿರುತ್ತಾರೆ.

ಹಗಲಾಗಲೀ, ರಾತ್ರಿಯಾಗಲಿ, ಅಡುಗೆ ಮನೆಯಾಗಲಿ, ಆಸ್ಪತ್ರೆಯಾಗಲಿ, ಸಾವಿನ ದೃಶ್ಯವಾದರೂ ಸರಿ ದುಃಖಕರ ಸನ್ನಿವೇಶವಾಗಲಿ, ದೃಶ್ಯಕ್ಕೂ, ಪಾತ್ರಕ್ಕೂ ಸನ್ನಿವೇಶಕ್ಕೂ ಸ್ವಲ್ಪವಾದರೂ ಹೊಂದಾಣಿಕೆ ಇರಬೇಕಲ್ಲವೇ? ಒಟ್ಟಿನಲ್ಲಿ ಎಲ್ಲರೂ ಯಾವಾಗಲೂ ಸದಾ ಮಿಂಚಿಂಗು.

-ಎಂ.ಸಿ. ವಿಜಯಲಕ್ಷ್ಮಿ, ಬೆಂಗಳೂರು

## ಸುಂದರ ಮಹಾದೇವ

ಸ್ಟಾರ್ ಸುವರ್ಣದಲ್ಲಿ ಮೂಡಿಬರುತ್ತಿರುವ ಶಿವ ಪಾರ್ವತಿ ಕಥೆ ಬಹಳ ಸೊಗಸಾಗಿದೆ. ಶಿವನ ಪುತ್ರಿ ಅಶೋಕ ಸುಂದರಿಯ ವಿವಾಹ ಬಹಳ ಚೆನ್ನಾಗಿ ತೋರಿಸಿದ್ದಾರೆ. ಅಶೋಕ ಸುಂದರಿಯನ್ನು ಪತಿಯ ಜತೆ ಅವರ ಮನೆಗೆ ಕಳಿಸುವ ದೃಶ್ಯ ವೀಕ್ಷಕರಿಗೂ ಕಂಬನಿ ಬರುವಂತಿದೆ.

-ಟಿ.ಆರ್.ಲಲಿತರಾವ್, ಬೆಂಗಳೂರು

## ‘ಬಿ’ ರಿಪೋರ್ಟ್ ಸಲ್ಲಿಸಿ

ಕಲರ್ಸ್ ಕನ್ನಡದ ಕುಲವಧು, ಪುಟ್ಟಗೌರಿ, ಅಗ್ನಿಸಾಕ್ಷಿ, ಲಕ್ಷ್ಮೀ ಬಾರಮ್ಮ, ಅಕ್ಕ, ಮನೆದೇವ್ರುನಂತಹ ಕ್ರೈಮ್ ಧಾರಾವಾಹಿಗಳನ್ನು ಈ ದಶಕದ ಅಂತ್ಯದ ವೇಳೆಗೂ ಮುಗಿಸುವ ಯೋಚನೆ ವಾಹಿನಿಯವರಿಗೆ ಇದ್ದಂತಿಲ್ಲ.

ಅಪರಾಧಿಗಳನ್ನು ಪತ್ತೆ ಹಚ್ಚಲು ಸಾಧ್ಯ ಆಗದಿದ್ದಾಗ ಇಲಾಖೆಯವರೇ ‘ಬಿ’ ರಿಪೋರ್ಟ್ ಸಲ್ಲಿಸಿ ಪ್ರಕರಣ ಮುಚ್ಚುತ್ತಾರೆ. ಇದನ್ನು ಗಮನಿಸಿ ನಮ್ಮ ಧಾರಾವಾಹಿ ನಿರ್ದೇಶಕರು ಎಲ್ಲಾ ಧಾರಾವಾಹಿಗಳಿಗೆ ‘ಬಿ’ ರಿಪೋರ್ಟ್ ಸಲ್ಲಿಸಿ. ಮುಕ್ತಾಯ ಮಾಡಿ ಪುಣ್ಯಕ್ಕೆ ಭಾಜನರಾಗಲಿ.

-ಇಂದು, ತಿಪಟೂರು

## ಸಹಾಯವಾಣಿ ಉಪಯೋಗಿಸಿ

ಎಲ್ಲಾ ಧಾರಾವಾಹಿಗಳಲ್ಲೂ ಸಾಮಾನ್ಯವಾಗಿ ಕಾಣುವುದು ಕೌಟುಂಬಿಕ ದೌರ್ಜನ್ಯ, ಮಕ್ಕಳ ಮೇಲಿನ ದೌರ್ಜನ್ಯ, ವಿವಾಹಿತರಿಗೆ ಮರು ಮದುವೆ ಯತ್ನ, ಹೆಂಗಸರನ್ನು ಹೊಡೆಯುವುದು, ಕಟ್ಟಿಹಾಕುವುದು, ಕೂಡಿಹಾಕುವುದು. ಮನೆಯ ಒಬ್ಬ ಹೆಂಗಸು ಎಲ್ಲಾ ಸಮಸ್ಯೆಗಳಿಗೂ ಯಾರಿಗೂ ಗೊತ್ತಾಗದಂತೆ ತಾನೇ ಬಗೆಹರಿಸಲು ಕಷ್ಟಪಡುವುದು ಎಷ್ಟು ಸರಿ? ಇಲ್ಲಿ ವೀಕ್ಷಕರ ಒಂದು ಅನುಮಾನವೆಂದರೆ ನಿರ್ದೇಶಕರಿಗೆ ಸ್ತ್ರೀ, ಮಕ್ಕಳ ಸಹಾಯವಾಣಿ ಬಗ್ಗೆ ತಿಳಿವಳಿಕೆ ಇಲ್ಲವೇ? ಎಂಬುದು.

–ಶಾಂತಾ ನಾಗರಾಜ್. ಕೆ., ಬೆಂಗಳೂರು